ತುಳು ಹಾಗೂ ಕೊಡವ ಭಾಷೆಗಳ ಅಭಿವೃದ್ಧಿ

811 - ಶ್ರೀ ವಿಜಯಕುಮಾರ್ ಶೆಟ್ಟಿ (ಸುರತ್ಕಲ್) : ಮಾನ್ಯ ಯುವಜನ ಸೇವಾ ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಎರಡು ಪ್ರಮುಖ ಭಾಷೆಗಳಾದ ತುಳು ಮತ್ತು ಕೊಡವ ಭಾಷೆ ಮತ್ತು ಸಂಸ್ಕೃತಿಯ ಅಭಿವೃದ್ಧಿಗಾಗಿ ರಾಜ್ಯ ಸರ್ಕಾರದ ಸಂಸ್ಕೃತಿ ಇಲಾಖೆ ಈವರೆಗೆ ಕೈಗೊಂಡಿರುವ ಕಾರ್ಯಕ್ರಮಗಳೇನು?

ಆ) ಮೇಲ್ಕಂಡ ಭಾಷೆಗಳ ಅಭಿವೃದ್ಧಿಗಾಗಿ ಸರ್ಕಾರ ಕೈಗೊಳ್ಳಲಿರುವ ನಿರ್ದಿಷ್ಟ ಕ್ರಮಗಳೇನು?

ಶ್ರೀ ಎಸ್. ರಮೇಶ್ (ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವ ರಾಜ್ಯ ಸಚಿವರು):

ಪಟ್ಟಿ ಲಗತ್ತಿಸಿದೆ.

ವಿವರಣ ಪಟ್ಟಿ

1) ತುಳು ಭಾಷೆಯ ಅಧ್ಯಯನ ಮತ್ತು ಅಭಿವೃದ್ಧಿಗಾಗಿ ಆಕಾರ ಗ್ರಂಥ ಪ್ರಕಟಿಸಲು ತುಳು ನಿಘಂಟು ಯೋಜನೆ.

2) ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ತುಳುಪೀಠ ಸ್ಥಾಪನೆಗಾಗಿ ಸರ್ಕಾರದಿಂದ ಸಹಾಯಧನ ನೀಡಿಕೆ.

3) ತುಳು ಭಾಷೆಯ ಬೆಳವಣಿಗೆ ಹಾಗೂ ಪ್ರೋತ್ಸಾಹಕ್ಕಾಗಿ ವಿಚಾರ ಸಂಕಿರಣ..

4) ತುಳು ಮತ್ತು ಕೊಡವ ಭಾಷೆಗಳ ನಾಟಕ ಪ್ರದರ್ಶನಗಳನ್ನು ಏರ್ಪಡಿಸಲು ಉತ್ತೇಜನ.

5) ಅಕಾಡೆಮಿಯು ಏರ್ಪಡಿಸುವ ನಾಟಕೋತ್ಸವದಲ್ಲಿ ಕೊಡವ ನಾಟಕ ಪ್ರದರ್ಶನ ಮತ್ತು ಕೊಡವ ಭಾಷೆಯಲ್ಲಿ ರಚಿಸಿದ ನಾಟಕ ಪುಸ್ತಕಕ್ಕೆ ಸಹಾಯಧನ ನೀಡಿಕೆ.

6) ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯಿಂದ ತುಳು ಮತ್ತು ಕೊಡವ ಕಲಾವಿದರಿಗೆ ಪ್ರಶಸ್ತಿ ನೀಡಲಾಗಿದೆ.

7) ಕರ್ನಾಟಕ ಜನಪದ ಮತ್ತು ಯಕ್ಷಗಾನ ಅಕಾಡೆಮಿ ಏರ್ಪಡಿಸುವ ಕಲಾ ಮೇಳದಲ್ಲಿ ತುಳು ಮತ್ತು ಕೊಡವ ಭಾಷೆ ಕಲಾವಿದರನ್ನು ಪ್ರೋತ್ಸಾಹಿಸಲಾಗುತ್ತಿದೆ.

ಶ್ರೀ ಕೆ. ವಿಜಯಕುಮಾರ್ ಶೆಟ್ಟಿ : ತುಳು ಮತ್ತು ಕೊಡವ ಭಾಷೆಗಳು ಕರ್ನಾಟಕದಲ್ಲಿ ಮಾತ್ರವಿರುವುದರಿಂದ ಅದಕ್ಕೆ ಆದ್ಯತೆ ಮೇರೆಗೆ ಸರ್ಕಾರ ಹಣಒದಗಿಸಬೇಕೆಂದು ಕೋರುತ್ತೇನೆ. ಅದೇ ಪ್ರಕಾರ ಮಂಗಳೂರು ವಿಶ್ವವಿದ್ಯಾಲಯದಲ್ಲಿ ತುಳು ಅಕಾಡೆಮಿ ಸ್ಥಾಪಿಸುವ ಉದ್ದೇಶ ಸರ್ಕಾರಕ್ಕಿದೆ. ಅದನ್ನು ಪ್ರೈವೇಟ್ ಸಂಸ್ಥೆಗಳಿಗೆ ಕೊಟ್ಟರೆ ಒಳ್ಳೆಯದೆಂದು ನನ್ನ ಅಭಿಪ್ರಾಯ, ಮಣಿಪಾಲ ಅಕಾಡೆಮಿ ಅಥವಾ ಧರ್ಮಸ್ಥಳದ ಮಂಜುನಾಥಸ್ವಾಮಿ ಸನ್ನಿಧಿಯಲ್ಲಿ ಅಂತಹ ಇನ್‌ಸ್ಟಿಟ್ಯೂಷನ್ಸ್ ಇರುವುದರಿಂದ ಅವರಿಗೆ ಕೊಟ್ಟರೆ ಒಳ್ಳೆಯದು. ಈಗ ಕೊಡುತ್ತಿರುವ ಧನಸಹಾಯ ಅದು ಕೇವಲ ಸಾರಿಗೆಗೆ ಮತ್ತು ಅದರ ನೌಕರರ ಸಂಬಳಕ್ಕೆ ಸಾಕಾಗುತ್ತಿದೆ ಅಷ್ಟೆ, ಇದನ್ನು ಉಳಿಸಿಕೊಳ್ಳುವ ದೃಷ್ಟಿಯಿಂದ ಹೆಚ್ಚಿನ ಧನಸಹಾಯ ಮಾಡಬೇಕೆಂದು ಕೋರುತ್ತೇನೆ.

ಶ್ರೀ ಎಸ್. ರಮೇಶ್ : ಇದು ಬಹಳ ಒಳ್ಳೆಯ ಸಲಹೆ. ವಿಶ್ವವಿದ್ಯಾನಿಲಯಕ್ಕೆ ಕೊಡಬಹುದು. ಆದರೆ ಅದೇ ಕೆಲವು ಶಾಸಕ ಮಿತ್ರರು ಬಂದು ಈ ನಿಘಂಟುವಿಗಾಗಿ ಸಾಕಷ್ಟು ಹಣವನ್ನು ವಿನಿಯೋಗಿಸಿದ್ದೇವೆ, ಇದರ ಕೆಲಸವನ್ನು ನಿಲ್ಲಿಸುವುದು ಬೇಡ,

ಅದು ಮುಂದುವರಿಯಲಿ, ಅದನ್ನು ಮುಗಿಸಿಬಿಟ್ಟು ಬೇಕಾದರೆ ವಿಶ್ವವಿದ್ಯಾನಿಲಯಕ್ಕೆ ಒಪ್ಪಿಸಿ ಎಂದು ಸಲಹೆ ಕೊಟ್ಟಿದ್ದಾರೆ. ಆದಷ್ಟು ಬೇಗ ಇದನ್ನು ಮಾಡುತ್ತೇನೆ.

ಪ್ರಶ್ನೆ ಸಂಖ್ಯೆ : 92 (58)

ಶ್ರೀ ಕೆ.ವಿ. ರವೀಂದ್ರನಾಥಬಾಬು : ಇದು ಮೈನರ್ ಇರಿಗೇಷನ್‌ಗೆ ಬರುತ್ತದೆ.

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು): ಅಧ್ಯಕ್ಷರೇ, ಇದು ಕಮ್ಯುನಿಕೇಷನ್ ಅಂಡ್ ಬಿಲ್ಡಿಂಗ್ಸ್‌ಗೆ ಬರುತ್ತದೆ.

ಅಧ್ಯಕ್ಷರು : ಇದು ಕಮ್ಯುನಿಕೇಷನ್ ಅಂಡ್ ಬಿಲ್ಡಿಂಗ್ಸ್‌ಗೆ ಬರುತ್ತದೆಯಂತೆ.

ಶ್ರೀ ಕೆ.ವಿ. ರವೀಂದ್ರನಾಥ ಬಾಬು : ಅಧ್ಯಕ್ಷರೇ, ಇದು ಮೈನರ್ ಇರಿಗೇಷನ್‌ಗೆ ಬರುತ್ತದೆ. ಏಕೆಂದು ಹೇಳಿದರೆ, ಸಣ್ಣಬೊಮ್ಮನಹಳ್ಳಿ ಪ್ರಾಜೆಕ್ಟ್ ಎಂದು ಹೇಳಿ ಅದು ಕಮ್ಯಾಂಡ್ ಏರಿಯಾದಲ್ಲಿ ಬರತಕ್ಕಂಥದ್ದು. ಆದ್ದರಿಂದ ಇದು ಮೈನರ್ ಇರಿಗೇಷನ್‌ನಲ್ಲಿಯೇ ಬರುತ್ತದೆ. ಅವರು ಈ ಬ್ರಿಡ್ಜಸ್ ಕಟ್ಟಿಸಬೇಕಾಗಿದೆ. ಇದುವರೆಗೂ ಈ ಒಂದು ಕನ್‌ಫ್ಯೂಷನ್‌ನಲ್ಲಿಯೇ 47 ವರ್ಷಗಳಿಂದಲೂ ಪೆಂಡಿಂಗ್ ಇದೆ. ಅಲ್ಲಿ ಪರಿಸ್ಥಿತಿ ಅಷ್ಟೇನೂ ಚೆನ್ನಾಗಿಲ್ಲ. ಆ ವಿಲೇಜರ್ಸ್ ತಿಮ್ಮನಹಳ್ಳಿಯಿಂದ ಧಾಟಿ ಹೋಗಬೇಕಾದರೆ ಆ ಹಳ್ಳದ ನಾಲ್ಕು ಅಡಿ ನೀರಿನಲ್ಲಿ ದಾಟಿ ಹೋಗಬೇಕು. ಯಾವ ಒಂದು ಕೆಲಸಕ್ಕೆ ಹೋಗಬೇಕಾದರೆ ಮತ್ತು ಬರಬೇಕಾದರೂ ಅವರು ನೀರನ್ನು ದಾಟಿ ಹೋಗಬೇಕು. ಅಲ್ಲಿ ಬಸ್ ಕೂಡಾ ಇಲ್ಲ. ಆ ರೀತಿ ಇರುವಾಗ ಅಲ್ಲಿನ ಹೆಣ್ಣುಮಕ್ಕಳ ಪರಿಸ್ಥಿತಿ ಏನು ಎನ್ನುವುದನ್ನು ನೀವೇ ನೋಡಬೇಕು. ಅಲ್ಲಿ ಕ್ರಾಸ್ ಮಾಡಿ ಹಳ್ಳವನ್ನು ನಾಲ್ಕು ಅಡಿ ನೀರಿನಲ್ಲಿ ಹೋಗಬೇಕಾದರೆ ಅವರು ಹೇಗೆ ಹೋಗಬೇಕು. ಅವರ ಪರಿಸ್ಥಿತಿಯೇನು? ನೀರು ಯಾವತ್ತೂ ಅಲ್ಲಿರುತ್ತದೆ. ಅದು ಡ್ಯಾಮ್ . ಸಣ್ಣಬೊಮ್ಮನಹಳ್ಳಿ ಪ್ರಾಜೆಕ್ಟ್ ಏರಿಯಾ ಅದು. ಕಮ್ಯಾಂಡ್ ಏರಿಯಾದಲ್ಲಿ ಬರತಕ್ಕಂಥದ್ದು. ಅದು ಮೈನರ್‌ಇರಿಗೇಷನ್‌ನಲ್ಲಿಯೇ ಬರುತ್ತದೆ. ನಾನು ಅದನ್ನು ಅದರಲ್ಲಿಯೇ ಇನ್‌ಕ್ಲೂಡ್ ಮಾಡುವುದಕ್ಕೆ ಕೂಡಾ ಕೊಟ್ಟಿದ್ದೇನೆ.

ಅಧ್ಯಕ್ಷರು : ಸರಿ ಅದನ್ನು ನೋಡಿಸಿ.

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ : ಅದನ್ನು ಸಿ.ಅಂಡ್.ಬಿ.ಗೆ ಕಳಿಸಿದ್ದೇವೆ. ಆದರೂ ನಾನು ಇದನ್ನು ಪರಿಶೀಲನೆ ಮಾಡಿಸುತ್ತೇನೆ.

ಅಧ್ಯಕ್ಷರು : ಅದು ನಿಮಗೇ ಬಂದಿದೆ, ನೆಕ್ಸ್ಟ್ ವೀಕ್‌ಗೆ ಇದು ಬರುತ್ತದೆ.

ನಕ್ಸಲೈಟ್ ಚಟುವಟಿಕೆ ಹೆಚ್ಚುತ್ತಿರುವುದು

820 - ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ಗೃಹ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ನಕ್ಸಲೈಟ್‌ಗಳ ಹಾವಳಿ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ ಅವುಗಳನ್ನು ತಡೆಗಟ್ಟಲು ಸರ್ಕಾರದವರು ಕಾರ್ಯಗಳನ್ನೇನಾದರೂ ಯೋಚಿಸಿದ್ದಾರೆಯೇ?

ಶ್ರೀ ಧರ್ಮಸಿಂಗ್ (ಗೃಹ ಸಚಿವರು)

ಅ) ಇಲ್ಲ

ಆ) ಹೌದು.

1) ಇಂತಹ ಪ್ರದೇಶಗಳಲ್ಲಿ ಆಧ್ಯತೆ ಮೇರೆಗೆ ಹಲವಾರು ಅಭಿವೃದ್ಧಿ ಕಾರ್ಯ ಕ್ರಮಗಳನ್ನು ಸರ್ಕಾರ ರೂಪಿಸಿದೆ.